

## ಜಾಗತಿಕ ಅಂಕಿ ಅಂಶ

- ಜಗತ್ತಿನಾದ್ಯಂತ ಅಂದಾಜು ಶೇ. 8ರಿಂದ 10ರಷ್ಟು ದಂಪತಿ ಸಂತಾನಹೀನತೆಯಿಂದ ಬಳಲುತ್ತಿದ್ದಾರೆ.
- ವಿಶ್ವದಾದ್ಯಂತ ಪ್ರತಿವರ್ಷ ಸುಮಾರು 6ರಿಂದ 8 ಕೋಟಿ ದಂಪತಿ ಸಂತಾನಹೀನತೆಯಿಂದ ತೊಂದರೆ ಅನುಭವಿಸುತ್ತಿದ್ದರೆ, ಈ ಅಂಕಿಅಂಶದ ಶೇ. 25ರಷ್ಟು ಎಂದರೆ ಸುಮಾರು 1.5 ಕೋಟಿಯಿಂದ 2 ಕೋಟಿ ದಂಪತಿ ಭಾರತ ದೇಶವೊಂದರಲ್ಲೇ ಈ ಸಮಸ್ಯೆ ಎದುರಿಸುತ್ತಿದ್ದಾರೆ.
- ಸಂತಾನಹೀನತೆಯು ಅಂದಾಜು 10ರಿಂದ 15 ಪ್ರತಿಶತ ದಂಪತಿಗಳನ್ನು ಬಹುವಾಗಿ ಕಾಡುತ್ತಿದೆ.
- ಭಾರತದಲ್ಲಿ ಫಲವತ್ತತೆ ಕೊರತೆ ಅಂದಾಜು 30 ದಶಲಕ್ಷ ದಂಪತಿ ಕಾಡುತ್ತಿದ್ದರೆ, ಇವರಲ್ಲಿ ಮೂರು ದಶಲಕ್ಷ ದಂಪತಿಗಳು ಮಾತ್ರ ಚಿಕಿತ್ಸೆ ಪಡೆಯಲು ಮುಂದಾಗಿರುವುದು.



ಇತ್ತೀಚಿನ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್5) ಪ್ರಕಾರ, ಭಾರತದ ಒಟ್ಟು ಫಲವತ್ತತೆ ಪ್ರಮಾಣವು 2015–16 ರಲ್ಲಿ 2.2 ರಿಂದ (ಪ್ರತಿ ಮಹಿಳೆಗೆ ಸರಾಸರಿ ಜನನಗಳು) 2019–20ರಲ್ಲಿ 2.0 ಕ್ಕೆ ಇಳಿದಿದೆ.

'ಇನ್ನೊಂದು ಆತಂಕದ ಸಂಗತಿ ಎಂದರೆ ಭಾರತದಲ್ಲಿ ಪುರುಷರಲ್ಲಿ ಫಲವತ್ತತೆ ಕೊರತೆ ಮಹಿಳೆಯರಿಗಿಂತ ಐದು ಪಟ್ಟು ಹೆಚ್ಚು. ಇದಕ್ಕೆ ಪ್ರಮುಖ ಕಾರಣ ಬೊಜ್ಜು, ಕೊಲೆಸ್ಟ್ರಾಲ್, ಮಧುಮೇಹ, ಧೂಮಪಾನ, ಮದ್ಯಪಾನದಂತಹ ದುರಭ್ಯಾಸ ಪುರುಷರಲ್ಲಿ ಹೆಚ್ಚುತ್ತಿರುವುದು. ಸಂತಾನಹೀನತೆ ಅನುಭವಿಸುತ್ತಿರುವ ಹೆಚ್ಚಿನ ಪುರುಷರಲ್ಲಿ ಒಂದು ಎಂಎಲ್ ವೀರ್ಯದಲ್ಲಿ ವೀರ್ಯಾಣುಗಳ ಸಂಖ್ಯೆ 60 ಮಿಲಿಯನ್‌ನಿಂದ 20 ಮಿಲಿಯನ್‌ಗೆ ಇಳಿದಿರುವುದು ಕೂಡ ಈ ಸಮಸ್ಯೆಗೆ ಕಾರಣ' ಎಂದು ವಿವರಿಸುತ್ತಾರೆ ಡಾ. ಅವಿವಾ. ದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ (AIIMS) ನಡೆಸಿದ ಅಧ್ಯಯನವೂ ಪುರುಷರ ವೀರ್ಯದಲ್ಲಿ ವೀರ್ಯಾಣುಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿರುವುದನ್ನು ಪತ್ತೆಹಚ್ಚಿದೆ. ಇದೂ ಸಹ ಸಂತಾನಹೀನತೆ ಸಮಸ್ಯೆ ಉಲ್ಬಣವಾಗಲು ಕಾರಣ.

### ಪರಿಹಾರೋಪಾಯವಿದೆ...

ಸಂತಾನಭಾಗ್ಯ ಪಡೆಯಲು ಐವಿಎಫ್ ತಂತ್ರಜ್ಞಾನ ಒಂದು ವರದಾನ ಎಂದೇ ಹೇಳಬಹುದು. ಈ ಚಿಕಿತ್ಸೆಯಲ್ಲಿ ದಂಪತಿ ಸಮಾನವಾಗಿ ಭಾಗಿಯಾಗಬೇಕಾಗುತ್ತದೆ.

ಪುರುಷರಲ್ಲಿ ಲೈಂಗಿಕ ಸಮಸ್ಯೆ ಹೆಚ್ಚುತ್ತಿರುವುದಕ್ಕೆ ಪ್ರಮುಖವಾಗಿ ನಾಲ್ಕು ವೈದ್ಯಕೀಯ ಕಾರಣಗಳಿವೆ.

- ಇರೆಕ್ಟೈಲ್ ಡಿಸ್‌ಫಂಕ್ಷನ್: ಇದು ಲೈಂಗಿಕ ಕ್ರಿಯೆಯ ಸಮಯದಲ್ಲಿ ಪುರುಷ ಜನನಾಂಗವು ಸರಿಯಾಗಿ ಕಾರ್ಯ ನಿರ್ವಹಿಸುವುದಕ್ಕೆ ಅಸಮರ್ಥವಾಗಿರುವ ಒಂದು ಲೈಂಗಿಕ ಸಮಸ್ಯೆ. ಇದಕ್ಕೆ ರೋಗಿಯೊಡನೆ ಸಮಾಲೋಚನೆ (ಕೌನ್ಸೆಲಿಂಗ್), ಇಂಜೆಕ್ಷನ್ ಮೂಲಕ ಔಷಧಗಳು ಅಥವಾ ಶಸ್ತ್ರಚಿಕಿತ್ಸೆಯಂತಹ ವಿಧಾನಗಳಿಂದ ಪರಿಹಾರ ಕಂಡುಕೊಳ್ಳಬಹುದು.
- ಪ್ರಿಮೆಚ್ಯೂರ್ ಇಜಾಕ್ಯುಲೇಷನ್: ಇದು ಲೈಂಗಿಕ ಕ್ರಿಯೆಗೂ ಮುನ್ನವೇ ಅಥವಾ ಆ ಕ್ಷಣದಲ್ಲಿ ಅನಿಯಂತ್ರಿತವಾಗಿ ಸಂಭವಿಸುವ ಕ್ರಿಯೆ. ಔಷಧ ಮತ್ತು ನಡವಳಿಕೆಯ ಚಿಕಿತ್ಸೆಯ ಮೂಲಕ ಇದನ್ನು ಪರಿಹರಿಸಬಹುದು.
- ಪೈರೊನಿ ಡಿಸೀಸ್: ಇದು ಪುರುಷ ಜನನಾಂಗದಲ್ಲಿನ ಮೃದು ಅಂಗಾಂಶದಲ್ಲಿನ ಫೈಬ್ರಸ್ ಪ್ಲೇಕ್ಸ್ ಬೆಳವಣಿಗೆಗೆ ಸಂಬಂಧಿಸಿದ ಒಂದು ಸಮಸ್ಯೆ. ಇದಕ್ಕೆ ಔಷಧಗಳು, ಶಸ್ತ್ರಚಿಕಿತ್ಸೆ ಮತ್ತು ಕೌನ್ಸೆಲಿಂಗ್ ಮೂಲಕ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ.
- ಮೈಕ್ರೊಪೆನಿಸ್: ಇದು ಪುರುಷ ಅತ್ಯಂತ ಸಣ್ಣ ಗಾತ್ರದ ಜನನಾಂಗವನ್ನು ಹೊಂದಿರುವಂತಹ ಸ್ಥಿತಿ. ಇದಕ್ಕೆ ಹಾರ್ಮೋನ್ ಥೆರಪಿ, ಶಸ್ತ್ರಚಿಕಿತ್ಸೆ ಮುಂತಾದ ಪರಿಹಾರವಿದೆ.

### ಭ್ರೂಣಶಾಸ್ತ್ರಜ್ಞರ ಕೊರತೆ

ದೇಶದಲ್ಲಿ ಸಂತಾನಹೀನತೆ ಸಮಸ್ಯೆ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ನುರಿತ ಭ್ರೂಣಶಾಸ್ತ್ರಜ್ಞರ ಕೊರತೆಯೂ ಒಂದು ಜ್ವಲಂತ ಸಮಸ್ಯೆಯಾಗಿ ಕಾಡುತ್ತಿದೆ. ಈ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಬೆಂಗಳೂರಿನ ನೋವಾ ಐವಿಎಫ್ ಫರ್ಟಿಲಿಟಿ ಭ್ರೂಣಶಾಸ್ತ್ರಜ್ಞರು ತಮ್ಮ ಪ್ರಾಯೋಗಿಕ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವ ತರಬೇತಿ ಅಕಾಡೆಮಿಯನ್ನು ಆರಂಭಿಸಿದೆ. ನೋವಾ ಅಕಾಡೆಮಿ ಆಫ್ ಕ್ಲಿನಿಕಲ್ ಎಂಬ್ರಿಯಾಲಜಿ ಟ್ರೈನಿಂಗ್ (ಎನ್‌ಎಸಿಇಟಿ) ಹೆಸರಿನಲ್ಲಿ ಆರಂಭವಾಗಿರುವ ಈ ಸಂಸ್ಥೆಯು ವಿದ್ಯಾರ್ಥಿಗಳಿಗೆ ಆಂಡ್ರೋಲಜಿ, ಎಂಬ್ರಿಯಾಲಜಿ ಮತ್ತು ಕ್ರಯೊಪ್ರಿಸರ್ವೇಶನ್ ಸೇರಿದಂತೆ ಐವಿಎಫ್ ಲ್ಯಾಬೊರೇಟರಿಗೆ ಸಂಬಂಧಿಸಿದ ಎಲ್ಲಾ ಪ್ರಾಯೋಗಿಕ ಅಂಶಗಳ ಬಗ್ಗೆ ತರಬೇತಿ ನೀಡಲು ಆರಂಭಿಸಿದೆ.

'ಒಂದು ಭ್ರೂಣಶಾಸ್ತ್ರ ಪ್ರಯೋಗಾಲಯವು ಮಹಿಳೆಯ ಗರ್ಭವನ್ನು ಅನುಕರಿಸುತ್ತದೆ. ಭ್ರೂಣ ಶಾಸ್ತ್ರಜ್ಞರು ಅಂಡಾಣು ಮತ್ತು ವೀರ್ಯ ರಕ್ಷಿಸುವಲ್ಲಿ ಮತ್ತು ಗರ್ಭಧಾರಣೆಗೆ ಕಾರಣವಾಗುವ ಉತ್ತಮವಾದ ವಾತಾವರಣ ಸೃಷ್ಟಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಅಲ್ಲದೆ ಅಂಡಾಣು ಮತ್ತು ವೀರ್ಯದ ಫಲವತ್ತತೆಯನ್ನು ತಾಂತ್ರಿಕವಾಗಿ ನಿರ್ವಹಣೆ ಮಾಡುತ್ತಾರೆ. ಈ ಹಿನ್ನೆಲೆಯಲ್ಲಿ ವೃತ್ತಿಪರರು ಈ ವಿಚಾರದಲ್ಲಿ ಅನುಭವ ಹೊಂದಿರಬೇಕು ಮತ್ತು ಭ್ರೂಣಗಳನ್ನು ಅತ್ಯಂತ ಕಾಳಜಿಯಿಂದ ನಿರ್ವಹಣೆ ಮಾಡಬೇಕಾಗುತ್ತದೆ' ಎನ್ನುತ್ತಾರೆ ಡಾ. ಅವಿವಾ ಪಿಂಟೊ. ■